# ಕನ್ನಡದಲ್ಲಿ ಬಳಸಿ ಫೋನ್‌ಪೇ, ಗೂಗಲ್ ಪೇ, ಪೇಟಿಎಂ

■ ಶಶಿಕುಮಾರ್ ಸಿ.

ನವೆಂಬರ್ ಬಂದಾಯ್ತು. ಇಡೀ ತಿಂಗಳು ರಾಜ್ಯದಲ್ಲಿ ಕನ್ನಡ ರಾಜ್ಯೋತ್ಸವದ್ದೇ ಡಿಂಡಿಮ. ಈ ರಾಜ್ಯೋತ್ಸವಕ್ಕೆ ಡಿಜಿಟಲ್ ಪೇಮೆಂಟ್ ಮತ್ತು ವಾಲೆಟ್ ಪೇ ಆ್ಯಪ್ ಆಧಾರಿತ ಸೇವೆಗಳನ್ನು ಇನ್ನು ಮುಂದೆ ಕನ್ನಡಿಗರೆಲ್ಲರೂ ಕನ್ನಡದ ಭಾಷೆಯಲ್ಲೇ ಬಳಸುವ ಸಂಕಲ್ಪ ಮಾಡಿ.

ಆ್ಯಪ್ ಆಧಾರಿತ ಸೇವೆಗಳಲ್ಲಿ ಕನ್ನಡ ಬಳಸುವ ಸೌಲಭ್ಯಗಳನ್ನು ಆಯಾ ಆ್ಯಪ್‌ಗಳು ಕೆಲ ದಿನಗಳಿಂದಲೇ ಕೊಟ್ಟಿವೆ. ಅದರ ಮೂಲ ಉದ್ದೇಶ ಸ್ಥಳೀಯ ಭಾಷೆಗಳ ಮೇಲಿನ ಗೌರವ ಹಾಗೂ ಆಯಾ ಭಾಷೆಗಳನ್ನು ಬೆಂಬಲಿಸುವುದು. ಬಹುತೇಕರಿಗೆ ಆ ಬಗ್ಗೆ ಗೊತ್ತಿಲ್ಲ. ಕೆಲವರಿಗೆ ವಿಷಯ ಗೊತ್ತಿದ್ದರೂ ಆ್ಯಪ್‌ಗಳಲ್ಲಿ ಹೇಗೆ ಕನ್ನಡ ಭಾಷೆಯನ್ನು ಸೆಟ್ಟಿಂಗ್ಸ್ ಮಾಡಿಕೊಳ್ಳಬೇಕು ಅನ್ನೋದು ಗೊತ್ತಿರುವುದಿಲ್ಲ.

ಬಳಕೆದಾರರ ಸ್ಮಾರ್ಟ್‌ಫೋನ್ (ಆಂಡ್ರಾಯ್ಡ್ ಅಥವಾ ಐಫೋನ್) ಕನ್ನಡ ಭಾಷೆಗೆ ಬೆಂಬಲಿಸಿದರೆ ಮಾತ್ರ ಈ ಆ್ಯಪ್‌ಗಳಲ್ಲಿ ಕನ್ನಡ ಫಾಂಟ್ ಲಭ್ಯವಾಗುತ್ತದೆ. ಈ ಮೂರು ಆ್ಯಪ್‌ಗಳನ್ನು ಮೊದಲ ಬಾರಿಗೆ ಡೌನ್‌ಲೋಡ್ ಮಾಡಿಕೊಂಡು ಇನ್‌ಸ್ಟಾಲ್ ಮಾಡುವಾಗಲೇ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಫೋನ್‌ಪೇ, ಗೂಗಲ್ ಪೇ, ಪೇಟಿಎ ಈ ಮೂರು ಆ್ಯಪ್‌ಗಳಲ್ಲಿ ಕನ್ನಡ ಭಾಷೆಯನ್ನು ಬಳಸುವುದು ಹೇಗೆ ಅನ್ನೋದನ್ನು ಇಲ್ಲಿ ತಿಳಿಸಲಾಗಿದೆ.

## ಫೋನ್ ಪೇ

ಫೋನ್ ಪೇ ಆ್ಯಪ್ ತೆರೆಯಬೇಕು. ಬಳಿಕ ಡಿಸ್‌ಪ್ಲೇನಲ್ಲಿ ಕಾಣುವ ವೃತ್ತಾಕಾರದ ಪ್ರೊಫೈಲ್ ಸಿಂಬಲ್ ಮೇಲೆ ಕ್ಲಿಕ್ಕಿಸಿದರೆ ಪ್ರೊಫೈಲ್ ಹೆಸರಿನಲ್ಲಿ ಮತ್ತೊಂದು ಪರದೆ ತೆರೆದುಕೊಳ್ಳುತ್ತದೆ. ಅದರಲ್ಲಿ 'ಮೈ ಲಾಂಗ್ವೇಜ್' ಆಯ್ಕೆ ಇರುತ್ತದೆ. ಅದರ ಮೇಲೆ ಒತ್ತಿದರೆ, ದೇಶದ ಪ್ರಮುಖ ಭಾಷೆಗಳು ತೆರೆದುಕೊಳ್ಳುತ್ತವೆ. ಆ ಪೈಕಿ ಕಾಣುವ 'ಕನ್ನಡ' ಭಾಷೆಯ ಆಯ್ಕೆಯ ಮೇಲೆ ಕ್ಲಿಕ್ಕಿಸಿ, 'ಕಂಟಿನ್ಯೂ' ಆಪ್ಷನ್ ಅನ್ನು ಒತ್ತಿದರೆ ಇಡೀ ಫೋನ್ ಪೇ ಆ್ಯಪ್ ಕನ್ನಡಮಯವಾಗುತ್ತದೆ.

## ಪೇಟಿಎಂ

ಪೇಟಿಎಂ ಆ್ಯಪ್‌ನ ಪರದೆ ಮೇಲೆ ಕಾಣುವ ಮೂರು ಅಡ್ಡಗೆರೆಗಳ ಆಯ್ಕೆ ಮೇಲೆ ಕ್ಲಿಕ್ಕಿಸಿದರೆ ಮತ್ತೊಂದು ಪರದೆ ತೆರೆದುಕೊಳ್ಳುತ್ತದೆ. ಅದರಲ್ಲಿ ಕಾಣುವ 'ಪೇಟಿಎಂ ಸೆಟ್ಟಿಂಗ್ಸ್' ಅನ್ನು ಒತ್ತಿ ಮುಂದೆ ಸಾಗಿದರೆ 'ಅಂಡರ್ ಜನರಲ್' ಅನ್ನೋ ಮತ್ತೊಂದು ಆಯ್ಕೆ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿದರೆ ಲಾಂಗ್ವೇಜ್ ಆಯ್ಕೆ ಕಾಣುತ್ತದೆ. ಅದರಲ್ಲಿ 'ಕನ್ನಡ ಭಾಷೆ' ಆಯ್ಕೆ ಮೇಲೆ ಒತ್ತಿದರೆ ನಿಮ್ಮ ಪೇಟಿಎಂ ಕನ್ನಡಮಯವಾಗುತ್ತದೆ.

## ಗೂಗಲ್ ಪೇ

ಗೂಗಲ್ ಪೇಗೆ ಬಳಕೆದಾರರು ಆ್ಯಪ್‌ನ ಮೊಬೈಲ್‌ನ ಬಲತುದಿಯ ಮೇಲ್ಭಾಗದಲ್ಲಿ ಮೂರು ಚುಕ್ಕೆಗಳ ಆಯ್ಕೆ ಇರುತ್ತದೆ. ಅದರ ಮೇಲೆ ಕ್ಲಿಕ್ಕಿಸಿದರೆ ಮತ್ತೊಂದು ಡೈಲಾಗ್ ಬಾಕ್ಸ್ ಓಪನ್ ಆಗುತ್ತದೆ. ಅದರಲ್ಲಿ ಕಾಣುವ 'ಸೆಟ್ಟಿಂಗ್ಸ್' ಆಯ್ಕೆ ಮೇಲೆ ಕ್ಲಿಕ್ಕಿಸಿದರೆ ಕಾಣುವ ಪರದೆ ಮೇಲೆ 'ಲಾಂಗ್ವೇಜ್' ಆಯ್ಕೆ ಇರುತ್ತದೆ. ಅದನ್ನು ಒತ್ತಿದರೆ 'ಕನ್ನಡ' ಎನ್ನುವ ಬರಹ ಕಾಣುತ್ತದೆ. ಅದರ ಮೇಲೆ ಕ್ಲಿಕ್ಕಿಸಿ ಸುಲಭವಾಗಿ ಕನ್ನಡ ಭಾಷೆಯನ್ನು ಬಳಸಬಹುದು.


ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL
ARECA TEA
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.

ಅರೆಕಾ ಟೀ ಒಂದು ಉತ್ತಮ ಆಯ್ಕೆ




ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್, ನಿಂಬೆ ಮತ್ತು ತುಳಸಿ

WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon bigbasket Flipkart
www.arecatea.in ನಲ್ಲೂ ಲಭ್ಯ